ರಾಸಾಯನಿಕ ಮತ್ತು ಕ್ರಿಮಿನಾಶಕ ಗೊಬ್ಬರ ಬಳಕೆ

255(690); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ರಾಜ್ಯದಲ್ಲಿ ಕೃಷಿಕರು ಹೆಚ್ಚಿನ ಫಸಲನ್ನು ಬೆಳೆಯಲು ರಾಸಾಯನಿಕ ಗೊಬ್ಬರಗಳನ್ನು ಹಾಗೂ ಕ್ರಿಮಿನಾಶಕಗಳನ್ನು ವಿಪರೀತವಾಗಿ ಬಳಸುತ್ತಿದ್ದು, ಇಂತಹ ಕೃಷಿಯ ಪದಾರ್ಥಗಳನ್ನು ವಿಷಯುಕ್ತವಾಗದಂತೆ ಸಂಸ್ಕರಿಸಲು ರೈತರಿಗೆ ಸೂಕ್ತ ತರಬೇತಿಗಳನ್ನು ನೀಡಲಾಗುವುದೇ;

ಆ) ಆಹಾರ ಪದಾರ್ಥಗಳು ಹೆಚ್ಚು ಹೆಚ್ಚು ವಿಷಯುಕ್ತವಾಗದಂತೆ ತಡೆಗಟ್ಟಲು ಸರ್ಕಾರ ಪ್ರಸ್ತುತ ಹಾಗೂ ಮುಂದೆ ಕೈಗೊಳ್ಳುವ ಯೋಜನೆಗಳನ್ನು ತಿಳಿಸುವುದು;

ಇ) ರಾಜ್ಯದಲ್ಲಿ ಆಹಾರ ಪದಾರ್ಥಗಳನ್ನು ಸಂಸ್ಕರಿಸುವ ಘಟಕಗಳು ಎಷ್ಟಿವೆ ಹಾಗೂ ಯಾವ ಯಾವ ಸ್ಥಳಗಳಲ್ಲಿವೆ;

ಈ) ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕೃಷಿಕರಿಗೆ ತರಬೇತಿ ಹಾಗೂ ಸಂಸ್ಕರಣ ಘಟಕಗಳನ್ನು ಸ್ಥಾಪಿಸಲು ಪ್ರಸ್ತುತ ಯೋಜನೆಗಳಿವೆಯೇ?

ಶ್ರೀ ಕೃಷ್ಣಭೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ಹೌದು

ಆ) ಕೃಷಿಯಲ್ಲಿ ರಾಸಾಯನಿಕಗಳ ಬಳಕೆಯನ್ನು ತಗ್ಗಿಸಲು ರಾಜ್ಯ ಸರ್ಕಾರವು ಸಾವಯುವ ಕೃಷಿ ಉತ್ತೇಜನ ಕಾರ್ಯಕ್ರಮಗಳನ್ನು ಉತ್ತೇಜಿಸುತ್ತಿದೆ. 2013–14ನೇ ಸಾಲಿನಿಂದ ಸಾವಯುವ ಭಾಗ್ಯವೆಂಬ ಯೋಜನೆ ಯನ್ನು ರಾಜ್ಯದ ಎಲ್ಲಾ ಹೋಬಳಿಗಳಲ್ಲಿ ಪ್ರಾರಂಭಿಸಿದ್ದು, ಸದರಿ ಯೋಜನೆಯಡಿ ಕೃಷಿ ಉತ್ಪನ್ನಗಳನ್ನು ಸಾವಯವ ಕೃಷಿ ಪದ್ದತಿಯಲ್ಲಿಯೇ ಬೆಳೆಯಲು ಒತ್ತು ನೀಡಲಾಗುತ್ತಿದೆ ಹಾಗೆಯೇ ಯೋಜನಾ ಪ್ರದೇಶವನ್ನು ಸಾವಯವ ಕೃಷಿ ಪ್ರಮಾಣೀಕರಣಕ್ಕೂ

ಒಳಪಡಿಸಲಾಗುತ್ತಿದೆ. ಮುಂದುವರೆದು ಸಾವಯವ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಸಂಸ್ಕರಣೆಗೂ ಸಹ ಯೋಜನೆಗಳನ್ನು ರೂಪಿಸಲಾಗುತ್ತಿದ್ದು, ಪ್ರಸ್ತುತ ಸಾಲಿನಿಂದ ಈ ಯೋಜನೆಗಳಿಗೂ ಸಹ ಚಾಲನೆ ನೀಡಲು ಉದ್ದೇಶಿಸಲಾಗಿದೆ.

ಇ) ಕೃಷಿ ಇಲಾಖೆಯು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಸಂಸ್ಕರಣಾ ಅಭಿಯಾನದ ಯೋಜನೆಗಳನ್ನು 2012–13 ನೇ ಸಾಲಿನಿಂದ ಅನುಷ್ಠಾನಗೊಳಿಸುತ್ತಿದ್ದು, ಸದರಿ ಅಭಿಯಾನದಡಿಯಲ್ಲಿ ಸ್ಥಾಪನೆಯಾದ/ ಆಧುನಿಕರಣಗೊಂಡ ಒಟ್ಟು 52 ಆಹಾರ ಸಂಸ್ಕರಣಾ ಘಟಕಗಳು ರಾಮನಗರ, ಬೆಳಗಾವಿ, ಬಳ್ಳಾರಿ, ಬಾಗಲಕೋಟೆ, ಬೆಂಗಳೂರು ನಗರ, ಬೀದರ್, ದಕ್ಷಿಣ ಕನ್ನಡ, ಹಾವೇರಿ, ಗುಲಬರ್ಗಾ, ಮೈಸೂರು, ರಾಯಚೂರು, ಉತ್ತರ ಕನ್ನಡ ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಇರುತ್ತವೆ.

ಈ) ಹೌದು, ರಾಷ್ಟ್ರೀಯ ಆಹಾರ ಸಂಸ್ಕರಣಾ ಅಭಿಯಾನದ ಯೋಜನೆಗಳ ಪ್ರಯೋಜನವನ್ನು ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರವು ಸೇರಿದಂತೆ ರಾಜ್ಯದ ಯಾವುದೇ ಭಾಗದ ಆಸಕ್ತ ಉದ್ದಿಮೆದಾರರು, ಸಂಘ–ಸಂಸ್ಥೆಗಳು, ರೈತರುಗಳು ಸೂಕ್ತ ಪ್ರಸ್ತಾವನೆಗಳೊಂದಿಗೆ ಯೋಜನೆಗಳ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ. ಆಹಾರ ಉತ್ಪನ್ನಗಳ ಸಂಸ್ಕರಣೆಗಾಗಿ ಉದ್ದಿಮೆಗಳ ಸ್ಥಾಪನೆ /ಆಧುನಿಕರಣಕ್ಕೆ ಶೇ.25% ರಷ್ಟು ಸಹಾಯಧನ (ಗರಿಷ್ಠ ` 50.00 ಲಕ್ಷ) ಹಾಗೆಯೇ ತೋಟಗಾರಿಕೆ ಉತ್ಪನ್ನಗಳನ್ನು ಹೊರತುಪಡಿಸಿ ಇತರೆ ಕೃಷಿ ಆಧಾರಿತ ಉತ್ಪನ್ನಗಳ ಶೀಥಲ ಸಂಗ್ರಹಣೆ ಸರಪಳಿ, ಮೌಲ್ಯವರ್ಧನೆ ಮತ್ತು ಸಂರಕ್ಷಣೆಗೆ ಮೂಲಭೂತ ಸೌಕರ್ಯಗಳ ಸ್ಥಾಪನೆಗೆ ಶೇ. 35% ರಷ್ಟು (ಗರಿಷ್ಠ ` 5.00ಕೋಟಿ) ಸಹಾಯಧನ, ಮುಂದುವರಿದು, ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಸಂಸ್ಕರಣೆ ಕೇಂದ್ರ/ಸಂಗ್ರಹಣೆ ಕೇಂದ್ರಗಳನ್ನು

ಸ್ಥಾಪಿಸಲು ಶೇ.50%ರಷ್ಟು (ಗರಿಷ್ಠ ` 2.50ಕೋಟಿ) ಸಹಾಯಧನ ನೀಡಲು ಅವಕಾಶವಿರುತ್ತದೆ.

ಈ ಯೋಜನೆಗಳಿಗೆ ಪೂರಕವಾಗಿ ಆಹಾರ ಸಂಸ್ಕರಣೆ ಬಗ್ಗೆ ಅರಿವು ಮೂಡಿಸುವ/ತಿಳುವಳಿಕೆ ನೀಡುವ ಕಾರ್ಯಕ್ರಮ, ಉದ್ಯಮ ಶೀಲತೆ ಅಭಿವೃದ್ಧಿ ಕಾರ್ಯಕ್ರಮ, ಆಹಾರ ಸಂಸ್ಕರಣೆಯಲ್ಲಿ ತರಬೇತಿ, ವಿಚಾರಗೋಷ್ಠಿ/ಕಾರ್ಯಾಗಾರ ಮುಂತಾದ ಕಾರ್ಯಕ್ರಮಗಳಿಗೆ ಸಹಾಯಧನ ನೀಡಲಾಗುತ್ತಿದೆ.

ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ

256(439); ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)

ಅ) ರಾಜ್ಯದ ಹಲವು ಭಾಗಗಳಲ್ಲಿ ರೈತರುಗಳು ಕೃಷಿ ಚಟುವಟಿಕೆಗಾಗಿ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದು ಕೃಷಿ ಚಟುವಟಿಕೆ ನಡೆಸುತ್ತಿದ್ದು, ರೈತರಹಿತದೃಷ್ಟಿಯಿಂದ ಅಕ್ರಮವಾಗಿ ವಿದ್ಯುತ್ ಪಡೆದುಕೊಂಡಿರುವ ಪಂಪ್ ಸೆಟ್‌ಗಳಿಗೆ ಅಕ್ರಮ ಸಕ್ರಮ ಯೋಜನೆಯನ್ನು ಜಾರಿಗೆ ತಂದು ಸಕ್ರಮಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಕಾಲ ಮಿತಿಯೊಳಗೆ ಅಕ್ರಮ–ಸಕ್ರಮ ಯೋಜನೆಯನ್ನು ಜಾರಿಗೆ ತರಲಾಗುವುದು (ವಿವರ ನೀಡುವುದು);?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಅಕ್ರಮ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮೀಕರಿಸುವ ಯೋಜನೆಯು ದಿನಾಂಕ:31–07–2012 ಕ್ಕೆ ಅಂತ್ಯಗೊಂಡಿದ್ದು, ಯೋಜನೆಯ ವಿಸ್ತರಣೆಯ ಪ್ರಸ್ತಾಪ ಸರ್ಕಾರದ ಮುಂದೆ ಇರುವುದಿಲ್ಲ ಈ ಹಿನ್ನೆಲೆಯಲ್ಲಿ ಐಚ್ಛಿಕವಾಗಿ ಜಾರಿಯಲ್ಲಿರುವ ಒ.ವೈ.ಟಿ ಹಾಗೂ ಅಕ್ರಮ ಸಕ್ರಮ ಯೋಜನೆಗಳ ಸಾಧಕ–ಬಾಧಕಗಳ ಬಗ್ಗೆ